## ಕಳೆದ ಸಂಚಿಕೆಯಲ್ಲಿ



ಪತಿಯ ಒಲವಿನಲ್ಲಿ ತೋಯ್ದು, ಆದೇ ನಶೆಯೊಳಗೆ ಮುಳುಗಿದಂತೆ ನಿದ್ರಾವಶಳಾಗಿದ್ದ ಮಾಯಾದೇವಿ, ಕನಸು ಕಂಡು ಎಚ್ಚೆತ್ತಳು. ಇದ್ದಕ್ಕಿದ್ದಂತೆ ಎದ್ದ ಪತ್ನಿಯನ್ನು ಕಂಡು ಶುದ್ಧೋದನನಿಗೆ ಗಾಬರಿ. ದುಃಸ್ವಪ್ನದ ಆತಂಕ ಮೊಗದಲ್ಲಿ ಕಾಣದೆ ಹೋದುದರಿಂದ ಸಮಾಧಾನಗೊಂಡ. ಬೆಳಗ್ಗೆ ಪಂಡಿತರನ್ನು ಕರೆಸಿ ಕನಸಿನ ಅರ್ಥ ತಿಳಿಯೋಣ ಎಂದು ಸಮಾಧಾನ ಮಾಡಿದ. ಕಂಡ ಕನಸು ಅಪೂರ್ವವಾಗಿತ್ತು. ಬಿಳಿಯಾನೆಯೊಂದು ರಾಣಿಯ ಒಡಲನ್ನು ಪ್ರವೇಶಿಸಿತ್ತು. ಆನೆಯಷ್ಟೇ ಬಲದ ಸುಪುತ್ರ ಜನಿಸುತ್ತಾನೆಂದು ಪಂಡಿತರು ಕನಸನ್ನು ಅರ್ಥೈಸಿದರು. ಆ ರಾಜಕುಮಾರ ಇಡೀ ಜಗತ್ತಿಗೇ ಬೆಳಕಾಗುತ್ತಾನೆನ್ನುವ ಸೂಚನೆಯಂತೂ ಕೆಲವರಿಗೆ ದೊರಕಿದಂತಿತ್ತು. ಮಾಯಾದೇವಿಗೆ ಮದುವೆಯ ದಿನಗಳು ನೆನಪಾದವು. ದೇವದಹದ ವಧುವಿಗೆ ಕಪಿಲವಸ್ತುವಿನಲ್ಲಿ ಭರ್ಜರಿ ಸ್ವಾಗತ ದೊರೆತಿತ್ತು. ತವರಿಗಿಂತಲೂ ಗಂಡನ ಮನೆ ತುಸು ದೊಡ್ಡದಾಗಿಯೇ ಇತ್ತು. ಮದುವೆಯಾದ ಬಹು ಕಾಲದವರೆಗೆ ಒಡಲು ತುಂಬಲಿಲ್ಲ ಎನ್ನುವುದನ್ನು ಬಿಟ್ಟರೆ, ದಿನಗಳು ಸುಂದರವಾಗಿದ್ದವು. ಕರುಳಕುಡಿಯನ್ನು ಹಂಬಲಿಸುತ್ತ ಗಂಡನೊಂದಿಗೆ ಮೈಮರೆತ ಆ ರಾತ್ರಿಯೇ ದಿವ್ಯಸ್ವಪ್ನವೊಂದು ಮುಖಾಮುಖಿಯಾದುದು.

ಬಾರಿಸುತ್ತಿದ್ದ. ಏಟಿನ ನೋವಿಗೆ ನಾಲ್ಕು ಮಾರು ದೂರ ಮುಂಬರಿದರೂ ಮತ್ತೆ ಸುಸ್ತಾಗಿ ನಿಲ್ಲುತ್ತಿದ್ದವು. ಬೆಳಗ್ಗಿನಿಂದ ನನ್ನನ್ನು ಹೊರುತ್ತಿರುವ ಬೋವಿಗಳಿಗೆಷ್ಟು ದಣಿವಾಗಿರಬೇಕು ಪಾಪ ಎಂದು ಅಲ್ಲಿಯೇ ನನ್ನನ್ನು ಕೆಳಕ್ಕಿಳಿಸುವಂತೆ ಕೋರಿಕೊಂಡೆ. ಅವರು ಮೇನೆಯನ್ನು ಕೆಳಕ್ಕಿಟ್ಟ ತಕ್ಷಣ ಅಪ್ಪ, ಅಮ್ಮ, ತಂಗಿ ಎಲ್ಲರೂ ಓಡೋಡಿ ಬಂದರು. ಬಹುಶಃ ನನಗೆ ನೋವು ಕಾಣಿಸಿಕೊಂಡಿತೇ ಎಂದು ಗಾಬರಿಗೊಂಡಿದ್ದರು. ನನ್ನ ಲವಲವಿಕೆಯನ್ನು ಕಂಡು ಸದ್ಯ ಎಂದು ನಿಟ್ಟುಸಿರುಬಿಟ್ಟರು. ಜಲಬಾಧೆ ತೀರಿಸಲಿರಬೇಕೆಂಬಂತೆ ಪಕ್ಕಕ್ಕೆ ಕೈಹಿಡಿದು ಪ್ರಜಾಪತಿದೇವಿ ಕರೆದೊಯ್ಯಲಾರಂಭಿಸಿದರೆ, ನಾನು ನಿರಾಕರಿಸಿ ಇಲ್ಲಿಯೇ ಈ ರಾತ್ರಿ ತಂಗೋಣವೆಂದೆ. ತಂದೆ, 'ಬೇಡಮ್ಮ, ಇನ್ನೇನು ನಾಲ್ಕು ಹರಿದಾರಿ ದೂರವಷ್ಟೇ...' ಎಂದರೂ ಕೇಳಲಿಲ್ಲ. 'ನನಗೂ ಬೆಳಗ್ಗಿನಿಂದ ಒಂದೇ ಸಮನೆ ಕೂತೂ ಕೂತು ಸುಸ್ತಾದಂತಾಗಿದೆ. ಪಾಪ, ಬೋವಿಗಳೂ ನಡೆದೂ ನಡೆದು ಬಳಲಿದ್ದಾರೆ. ಮೇಲಾಗಿ ಈ ರಾತ್ರಿ ಇಲ್ಲಿಯೇ ಇದ್ದು ಬೆಳಗ್ಗೆ ಪ್ರಯಾಣ ಮುಂದುವರೆಸೋಣವೆಂದು ಏಕೋ ಮನಸ್ಸು ಹೇಳುತ್ತಿದೆ' ಎಂದು ಅವರ ಬಾಯಿ ಮುಚ್ಚಿಸಿ, ವಿವಿಧ ಜಾತಿಯ ಮರಗಿಡಗಳನ್ನು, ಅವುಗಳ ಪುಷ್ಪಲತೆಗಳನ್ನು ನೋಡಿ ಆಕರ್ಷಿತಳಾದಂತೆ ನಟಿಸುತ್ತಾ ಮುಂದೆ ಮುಂದೆ ಹೋದೆ. ಹೊಟ್ಟೆಯಲ್ಲಿ ಗರ್ಭ ಇರದಿದ್ದರೆ ಇಷ್ಟೊಂದು ಆಯಾಸವಾಗುತ್ತಿರಲಿಲ್ಲವೆಂದು ಭಾವಿಸಿದ ಪೋಷಕರೂ, ಸರಿಯೆಂದು ಬಿಡಾರ ಹೂಡಿಸಿದರು.

ನಾನು ಸೂರ್ಯಾಸ್ತವನ್ನು ಕಣ್ತುಂಬ ತುಂಬಿಕೊಂಡು, ಚಿಕ್ಕ ಹುಡುಗಿಯಿದ್ದಾಗ ಜೂಟಾಟ, ಮರಕೋತಿಯಾಟ ಆಡುತ್ತಿದ್ದ ಸಾಲವೃಕ್ಷದ ಬಳಿ ಬಂದಾಗ ಬಾಲ್ಯದ ನೆನಪುಗಳು ಮರುಕಳಿಸಿದವು. ಇಳಿಬಿದ್ದಿದ್ದ ಹರೆಗಳನ್ನು ಹಿಡಿದು ಜೋಕಾಲಿಯಂತೆ ಜೀಕುತ್ತ ಸಂಭ್ರಮಿಸಿದೆ. ನನ್ನ ಖುಷಿಯೆ ತಮ್ಮ ಖುಷಿಯೆಂದು ನಂಬಿದ್ದ ತಂದೆ ತಾಯಂದಿರೂ ನನ್ನ ಹುರುಪು ಕಂಡು ಸಂತಸಪಡುತ್ತಿದ್ದರು. ಅಷ್ಟರಲ್ಲಿ ಪೂರ್ವದಲ್ಲಿ ಉದಯಿಸಿದ ಚಂದ್ರನೂ ಪೂರ್ಣಕುಂಭದಂತೆ ಕಂಡುಬಂದದ್ದರಿಂದ ಇಂದು ಪೌರ್ಣಿಮೆಯಿರಬೇಕೆಂದು ಇನ್ನಷ್ಟು ಹಿಗ್ಗಿದೆ. ಬೆಳದಿಂಗಳೆಂದರೆ ನನಗೆ ಯಾವಾಗಲೂ ಆಪ್ಯಾಯಮಾನ. ನಾನು ಸಣ್ಣ ಹುಡುಗಿಯಿದ್ದಾಗ ಮನೆಯಂಗಳದಲ್ಲಿ ಬೆಳ್ದಿಂಗಳಪ್ಪನ ಪೂಜೆ ಮಾಡಿ ನಲಿಯುತ್ತಿದ್ದುದು ನೆನಪಿಗೆ ಬಂತು. ಅಷ್ಟರಲ್ಲಿ ರಾತ್ರಿಯ ಊಟ ಸಿದ್ಧವಾಗಿತ್ತು. ಇದ್ದುದರಲ್ಲಿ ಸ್ವಲ್ಪ ಬಯಲು ಪ್ರದೇಶವನ್ನು ಆಯ್ದುಕೊಂಡು, ದೊಂದಿಗಳನ್ನೆಲ್ಲ ಮರಗಳ ಮರೆಗೆ ಕಳಿಸಿ, ಬೆಳದಿಂಗಳು ನೇರ ಊಟದ ತಟ್ಟೆಯ ಮೇಲೆ ಬೀಳುವಂತೆ ಮಾಡಿಕೊಂಡು, ಊಟದ ಸಂಭ್ರಮವನ್ನು ಇಮ್ಮಡಿಗೊಳಿಸಿಕೊಂಡೆ. ಎಲ್ಲರೂ ನನ್ನ ಲಹರಿಗೆ ತಕ್ಕಂತೆ ಕುಣಿಯುತ್ತಿರುವಂತೆ ಭಾಸವಾದರೂ, ಅವತ್ತಿನ ಆಕರ್ಷಣೆಯ ಕೇಂದ್ರಬಿಂದು ನಾನೇ ಆದ್ದರಿಂದ ಎಲ್ಲರೂ ನನ್ನ ಮಾತಿಗೆ ಪ್ರಾಮುಖ್ಯತೆಯನ್ನು ನೀಡುತ್ತಿದ್ದರು.

ಊಟವಾದ ನಂತರ ಪ್ರಜಾಪತಿಯನ್ನು ಕರೆದುಕೊಂಡು ಮತ್ತೆ ಸಾಲವೃಕ್ಷದ ಜೀಕಾಟಕ್ಕೆ ಕರೆದೊಯ್ದೆ. ಅಲ್ಲಿ ಕರು ಹಾಕಿದ್ದ ಕಲ್ಯಾಣಿ ಹಸುವನ್ನು ಕಂಡು, ಅದರ ಮೈದಡವಿದೆ. ನಿನ್ನಂತೆ ನಾನೂ ಇನ್ನೇನು ನನ್ನ ಮಗುವಿಗೂ ಜನ್ಮ ನೀಡಲಿದ್ದೇನೆ ಗೊತ್ತಾ ಎಂದಂದು ತುಂಬಿ ಬಂದ ಉತ್ಕಂಠತೆಯಲ್ಲಿ ಮನದಲ್ಲೇ ಸಂಭ್ರಮಿಸಿದೆ. ಅದಾಗ ತಾನೇ ಹುಟ್ಟಿದ್ದ ಕರು ಅದು ಹೇಗೆ ಎಷ್ಟು ಬೇಗ ಎದ್ದು ನಡೆದಾಡಲಾರಂಭಿಸಿತಲ್ಲ ಎಂದು ತಂಗಿಯ ಜೊತೆ ತರ್ಕಿಸಿದೆ. ಆದರೆ ನಮ್ಮ ಮಕ್ಕಳು ಏಕೆ ವರ್ಷಗಟ್ಟಲೇ ಕಾಲ ತೆಗೆದುಕೊಳ್ಳುತ್ತವಲ್ಲ ಎಂಬ ನನ್ನ ಪ್ರಶ್ನೆಗೆ ಆಕೆಯಲ್ಲಿ ಉತ್ತರವಿರಲಿಲ್ಲ. ಆದರೂ, ಆಯಾ ಪ್ರಾಣಿಗಳ ಜೀವಮಾನದ ಆಧಾರದ ಮೇಲೆ ಅದು ನಿರ್ಧಾರವಾಗಿರುತ್ತದೆಂದು ಕಾಣುತ್ತದೆ ಎಂದೇನೋ ಹೇಳಿದರೂ ಅದಕ್ಕೆ ಆಕೆಯಲ್ಲಿ ಸ್ಪಷ್ಟತೆ ಇರಲಿಲ್ಲ. ಸಾಲವೃಕ್ಷದ ಕೊಂಬೆಯನ್ನೇ ಹಿಡಿದು ಜೀಕಿ ಜೀಕಿ ಜೋಕಾಲಿ ಆಡುತ್ತಿರಬೇಕಾದರೆ ಇದ್ದಕ್ಕಿದ್ದಂತೆ ಪಕ್ಕೆಯಲ್ಲಿ ಕಳಕ್ಕನೇ ಉಳುಕಿದಂತಾಯಿತು. ಅದು ವಿಪರೀತ ನೋವಿಗೆ ಕಾರಣವಾಯಿತು. ತಂದೆ ತಾಯಿ ಗಾಬರಿ ಬೀಳುತ್ತಾರೆಂದು ನಾನು ತುಟಿ ಕಚ್ಚಿ ದುಃಖವನ್ನು ತಡೆಹಿಡಿದೆನಾದರೂ ಸಾಧ್ಯವಾಗದೇ ಹೋದಾಗ ಅನಿವಾರ್ಯವಾಗಿ ಬಾಯಿಬಿಟ್ಟೆ. ಪ್ರಜಾಪತಿ ಕೂಡಲೇ ತಾಯಿಯನ್ನು ಕೂಗಿದಳು. ಆಕೆಯ ಕೂಗಿನ ಆತಂಕಕ್ಕೆ ತಂದೆಯೂ ಓಡಿಬಂದರು. ಜತೆಗೆ ಒಂದಷ್ಟು ಭಟರೂ. ಒಂದೆರಡು ಹೆಜ್ಜೆಗಳನ್ನೂ ಮುಂದೆ ಇಡಲು ನನಗೆ ಸಾಧ್ಯವಾಗಲಿಲ್ಲ.

ನನಗೆ ಹೆರಿಗೆ ನೋವು ಕಾಣಿಸಿಕೊಂಡಿತೆಂದು ಅಮ್ಮನಿಗೆ ಅವರ ಅನುಭವದ ಆಧಾರದ ಮೇಲೆ ಗೊತ್ತಾಯಿತು. ಕೂಡಲೇ ಅಲ್ಲಿಯೇ ಒಂದು ಚೌಕಾಕಾರದ ಸೀರೆಯ ಮರೆಯನ್ನು ಮಾಡಿದರು. ರಥದಲ್ಲಿದ್ದ ಮೆತ್ತನೆಯ ಹಾಸಿಗೆ ಮತ್ತು ಒತ್ತುಗಳನ್ನು ಹೊತ್ತುತಂದು ಹಾಸಿದರು. ಆ ಹಾಸಿನ ಮೇಲೆ ನನ್ನನ್ನು ಅಕ್ಷರಶಃ ಅನಾಮತ್ತಾಗಿ ಎತ್ತಿ ಮಲಗಿಸಿದರು. ಅಮ್ಮನಿಗೆ ಎಷ್ಟೊಂದು ಮಾನಸಿಕ ಒತ್ತಡವಾಯಿತೆಂದರೆ ಆಕೆಯ ಕೈಗಳು ನಡುಗುತ್ತಿದ್ದವು. ಅಮ್ಮ, ತಂಗಿ ಇಬ್ಬರನ್ನು ಬಿಟ್ಟರೆ ನಮ್ಮ ಜೊತೆ ಬೇರಾರೂ ಹೆಂಗಸರಿಲ್ಲ. ಅವರಾದರೂ ಹೇಗೆ ನಿಭಾಯಿಸಬಲ್ಲರು? ತಂದೆ ಕೂಡಲೇ ಹತ್ತಿರದ ಹಳ್ಳಿಗಳಿಗೆ ಹೋಗಿ ಸೂಲಗಿತ್ತಿಯರನ್ನು ಕರೆತರಲು ಜನರನ್ನು ಕಳಿಸಿದರು. ಸೂಲಗಿತ್ತಿಯರು ಬರುವವರೆಗೆ ಅಮ್ಮ, ತಂಗಿ ಇಬ್ಬರೂ ತಮಗೆ ಗೊತ್ತಿದ್ದ ಪ್ರಯೋಗಗಳನ್ನೆಲ್ಲ ಮಾಡಿದರು. ಅಷ್ಟಕ್ಕೂ ಅಮ್ಮನಿಗಾದರೂ ಹೆರಿಗೆಯಾದ ಅನುಭವವಿದೆಯೇ ವಿನಾ, ಹೆರಿಗೆ ಮಾಡಿಸಿ ಅನುಭವವಿಲ್ಲ. ನಾನಾದರೋ ವಿಪರೀತ ನೋವಿನಿಂದ ಕಿರುಚುತ್ತಿದ್ದೆ. ಆದರೆ ತಂದೆಯಾದರೋ ಅಸಹಾಯಕರಂತೆ ಶತಪಥ ಹಾಕುತ್ತಾ, ನನಗೇನೂ ತೊಂದರೆಯಾಗದಿರುವಂತೆ ಪ್ರಾರ್ಥಿಸುತ್ತಿದ್ದರು. ಆ ನೋವಿನಲ್ಲೂ ಅಮ್ಮ ಮಾತ್ರ, 'ಎಲ್ಲ ನಿನ್ನಿಂದಲೇ...' ಎಂದು ಪದೇ ಪದೇ ನನ್ನನ್ನೇ ಬೈಯುತ್ತಿದ್ದಳು... ಬಂದ ಬೇರೆ ಬೇರೆ ಹಳ್ಳಿಯ ಇಬ್ಬರು–ಮೂವರು ಸೂಲಗಿತ್ತಿಯರಿಗೆ ದೂರದಲ್ಲಿದ್ದ ರಥ–ಕುದುರೆಗಳು ಕಣ್ಣಿಗೆ ಬೀಳದೇ, ನಾವು ಯಾರೋ ದಾರಿಹೋಕರಿರಬೇಕೆಂದು ನಮ್ಮ ಪೂರ್ವಾಪರವನ್ನೇನೂ ವಿಚಾರಿಸದೇ, ಹೆರಿಗೆ ಮಾಡಿಸಲು ಮುಂದಾದರು. ಬಟ್ಟೆಯ ಮರೆಯಿಂದ ಕೈಹಾಕಿ ನೋಡಿದ ಅವರಲ್ಲೊಬ್ಬಳು, 'ಸದ್ಯ, ಮಗುವಿನ ತಲೆ ತಿರುವುಮುರುವಾಗಿಲ್ಲ. ಚೊಚ್ಚಲು ಹೆರಿಗೆಯಾದ್ದರಿಂದ ಕೀಲುಗಳು ಇನ್ನೂ ಸಡಿಲಾಗಿಲ್ಲ. ಪ್ರಯಾಣದ ಕುಲುಕಾಟಕ್ಕೋ ಏನೋ ಒಂದೆರಡು ದಿನ ಮುಂಚೆಯೇ ಹೆರಿಗೆ ನೋವು ಕಾಣಿಸಿಕೊಂಡಿದೆ...' ಎಂದಾಗ, ಅಮ್ಮ ನನ್ನ ಜೋಕಾಲಿಯಾಟದ ಸಂಭ್ರಮವನ್ನು ಹೀಯಾಳಿಸಿ ಸಹಸ್ರನಾಮಾರ್ಚನೆ ಮಾಡಿದಳು. ನಿರೀಕ್ಷೆಗಿಂತಲೂ